G and Wc 13/2023

ಪಿ ಡಬ್ಲ್ಯೂ : 1

ದಿನಾಂಕಃ 24.01.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

**ಪಾಟೀ ಸವಾಲುಃ ಎದುರುದಾರರ ಪರ ಶ್ರೀ ಎಂ ಎನ್ ವಕೀಲರಿಂದಃ**

ನನ್ನ ಮಗು 2013 ರಲ್ಲಿ ಹುಟ್ಟಿದ ಜನ್ಮದ ದಿನಾಂಕ ಮತ್ತು ತಿಂಗಳನ್ನು ನನಗೆ ಈಗ ಹೇಳಲು ಆಗುವುದಿಲ್ಲ. ನನ್ನ ಮಗು ಹುಟ್ಟಿದ ದಿನಾಂಕದಿಂದ ನನ್ನ ಜೊತೆ ವಾಸವಿರಲಿಲ್ಲ ಎಂದರೆ ಸಾಕ್ಷಿ ನನ್ನ ಮಗು ನನ್ನ ಜೊತೆ ಸ್ವಲ್ಪ ದಿನಗಳು ವಾಸವಿತ್ತು ಎಂದು ನುಡಿಯುತ್ತಾರೆ. ನನ್ನ ಮಗು ನನ್ನ ಜೊತೆ 1 ವರ್ಷ ವಾಸವಿತ್ತು. ನನ್ನ ಜೊತೆ ನನ್ನ ಮಗು ವಾಸವಿರಲಿಲ್ಲ ಎಂದರೆ ವಾಸವಿತ್ತು ಎಂದು ನುಡಿಯುತ್ತಾರೆ. ಒಂದು ವರ್ಷ ನನ್ನ ಜೊತೆ ನನ್ನ ಮಗು ಇದ್ದ ಸಮಯ ಬಿಟ್ಟರೆ ಬೇರೆ ಸಮಯದಲ್ಲಿ ನನ್ನ ಜೊತೆ ವಾಸವಿರಲಿಲ್ಲ ಎಂದು ಸೂಚಿಸಿದರೆ ಸಾಕ್ಷಿ ನಾನು ನನ್ನ ಮಗುವನ್ನು ನೋಡಲು ಹೋಗಿ ಬರುವುದನ್ನು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ನನ್ನ ಮಗುವನ್ನು ನೋಡಲು ತಿಂಗಳಿಗೆ ಒಮ್ಮೆ ಹೋಗಿ ಬರುತ್ತಿದ್ದೆ. ನಾನು ಪ್ರತಿ ತಿಂಗಳು ಯಾವುದಾದರೂ ಭಾನುವಾರದಂದು ನನ್ನ ಮಗುವನ್ನು ನೋಡಲು ಹೋಗುತ್ತಿದ್ದೆ.

ನನಗೂ ಮತ್ತು ನನ್ನ ಹೆಂಡತಿಯ ನಡುವೆ ಹೊಂದಾಣಿಕೆ ಇಲ್ಲದೇ ಇರುವ ಸಮಯದಲ್ಲಿ ಅಂದರೆ ನನ್ನ ಜೊತೆ ಮಗು ಇದ್ದ 1 ವರ್ಷದ ನಂತರ ನನ್ನಹೆಂಡತಿ ಬೆಂಗಳೂರಿನಲ್ಲಿ ವಾಸ ಮಾಡುವ ಸಮಯದಲ್ಲಿ ನನ್ನ ಮಗು ನನ್ನ ಹೆಂಡತಿಯೆಂದಿಗೆ ಇತ್ತು ಎಂದರೆ ಸರಿ. ನನ್ನ ಮೇಲೆ ಆ ಸಮಯದಲ್ಲಿ ನಾನು ತೊಂದರೆ ಕೊಡುತ್ತಿದ್ದೇನೆ ಎಂದು ನನ್ನ ಹೆಂಡತಿ ನನ್ನ ಮೇಲೆ ದೂರು ನೀಡಿದ್ದರು ಎಂದರೆ ಸರಿ. ಆ ದೂರುಗಳು ಸುಳ್ಳು ದೂರುಗಳಾಗಿರುತ್ತವೆ. ನನ್ನ ಮಗುವನ್ನು ನೋಡಲು ನಾನು ಬೆಂಗಳೂರಿಗೆ ಹೋಗಿರುವುದಿಲ್ಲ ಎಂದರೆ ಸರಿಯಲ್ಲ.

ಮಗು ಯಾವ ಶಾಲೆಗೆ ಹೋಗುತ್ತಿದೆ ಎಂದು ಕೇಳಿದರೆ ನನಗೆ ಶಾಲೆಯ ವಿಳಾಸ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ಶಾಲೆಗೆ ನನ್ನ ಮಗುವನ್ನು ಸೇರಿಸಲು ಹೋಗಿರುತ್ತೇನಾ ಎಂದರೆ ಇಲ್ಲ, ಅದಕ್ಕೆ ಕಾರಣ ನನ್ನನ್ನು ಹೊಡೆಯಲು ಬರುತ್ತಿದ್ದರು ಎಂದು ನುಡಿಯುತ್ತಾರೆ. ನನ್ನ ಮಾಜಿ ಹೆಂಡತಿ ಮತ್ತು ಅವರ ತಾಯಿ ನನ್ನನ್ನು ಹೊಡೆಯಲು ಬರುತ್ತಿದ್ದ ಕಾರಣ ನಾನು ನನ್ನ ಮಗುವನ್ನು ಶಾಲೆಗೆ ಸೇರಿಸುವ ಸಮಯದಲ್ಲಿ ಹೋಗಿರುವುದಿಲ್ಲ. ನಾನು ಪೊಲೀಸರ ಹತ್ತಿರ ಈ ವಿಚಾರವಾಗಿ ದೂರು ನೀಡಿರುತ್ತೀರಾ ಎಂದರೆ ಸಾಕ್ಷಿ ನಾನು ನೋಟೀಸ್ ಕಳುಹಿಸಿರುತ್ತೇನೆ

ಎಂದು ನುಡಿಯುತ್ತಾರೆ. ಸದರಿ ನೋಟೀಸ್ ನ್ನು ಯಾವ ವರ್ಷ ನೀಡಿರುತ್ತೀರಾ ಎಂದರೆ ಮಗು ಹುಟ್ಟಿದ 5 ವರ್ಷಗಳ ನಂತರ ಸದರಿ ನೋಟೀಸ್ ನ್ನು ನೀಡಿರುತ್ತೇನೆ. ಸದರಿ ನೋಟೀಸ್ ನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿಯ ಯಾವುದೇ ನೋಟೀಸ್ ನ್ನು ನಾನು ನೀಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಕೊಟ್ಟಿರುತ್ತೇನೆ. ಸದರಿ ನೋಟೀಸ್ ನ್ನು ನಾನು ಮಂಜುನಾಥ್ ವಕೀಲರ ಕಡೆಯಿಂದ ಕೊಡಿಸಿರುತ್ತೇನೆ. ನಾನು ನೋಟೀಸ್ ನೀಡಿದ ನಂತರ ನನ್ನ ಮಾಜಿ ಹೆಂಡತಿ ಏನಾದರೂ ಉತ್ತರ ನೀಡಿದ್ದರಾ ಎಂದರೆ ನೀಡಿರುತ್ತಾರೆ. ಸಾಕ್ಷಿಯ ಹತ್ತಿರ ಸದರಿ ದಾಖಲಾತಿ ಇದೆಯೇ ಎಂದರೆ ಸಾಕ್ಷಿ ಇಲ್ಲ ಎಂದು ಹೇಳಿದ್ದು, ಅವರು ಮೌಖಿಕವಾಗಿ ಮಗುವನ್ನು ನನ್ನ ಜೊತೆ ಕಳುಹಿಸುವುದಿಲ್ಲ ಎಂದು ಹೇಳಿರುತ್ತಾರೆ ಎಂದು ನುಡಿಯುತ್ತಾರೆ.

ಸದರಿ ವಿಚಾರವಾಗಿ ಮಹಿಳಾ ಆಯೋಗಕ್ಕೆ ದೂರು ನೀಡಿರುತ್ತೀರಾ ಎಂದರೆ ನಾನು ಪಂಚಾಯಿತಿ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ಪಂಚಾಯಿತಿಗೆ ನಮ್ಮ ಊರಿನ ಪಂಚಾಯಿತಿ ಸದಸ್ಯರು ಸೇರಿದ್ದರು, ಅವರ ಹೆಸರು ನನಗೆ ಈಗ ಹೇಳಲಾಗುವುದಿಲ್ಲ. ಪಂಚಾಯಿತಿ ಯಾವ ವರ್ಷ, ಯಾವ ದಿನಾಂಕ ಸದರಿ ಪಂಚಾಯಿತಿ ಆಗಿರುತ್ತದೆ ಎಂದರೆ ಸಾಕ್ಷಿ 2013 ರಲ್ಲಿ ಸದರಿ ಪಂಚಾಯಿತಿ ಆಗಿರುತ್ತದೆ ಎಂದು ನುಡಿಯುತ್ತಾರೆ. 2013ರ ನಂತರ ಬೇರೆ ಯಾವುದೇ ಪಂಚಾಯಿತಿ ನಡೆದಿರುವುದಿಲ್ಲ .

ನನ್ನ ಮಗು 7 ನೆ ತರಗತಿಯಲ್ಲಿ ಓದುತ್ತಿದೆ. ನನ್ನ ಮಗು 1 ನೆ ತರಗತಿಯಿಂದ 7 ನೆ ತರಗತಿಯವರೆಗೂ ಯಾವ ಯಾವ ಶಾಲೆಯಲ್ಲಿ ಓದುತ್ತಿದೆ ಎಂದು ನನಗೆ ಗೊತ್ತಿಲ್ಲ. ಅದಕ್ಕೆ ಕಾರಣ ನನ್ನ ಹೆಂಡತಿ ಅದರ ಬಗ್ಗೆ ನನಗೆ ಮಾಹಿತಿ ನೀಡಿಲ್ಲ. ಯಾವ ಶಾಲೆಯಲ್ಲಿ ನನ್ನ ಮಗು ಓದುತ್ತಿದೆ ಎಂದು ನಾನು ಬೇರೆ ಕಡೆಯಿಂದ ವಿಚಾರ ಮಾಡಿ ತಿಳಿದುಕೊಂಡಿಲ್ಲ. ನಾನು ಸದರಿ ಮಗುವಿನ ಶಾಲೆಯ ಬಗ್ಗೆ ಮಗುವಿನ ಹತ್ತಿರವೂ ಕೇಳಿ ತಿಳಿದುಕೊಂಡಿಲ್ಲ. ನಾನು ಮಗುವಿನ ವಿದ್ಯಾಭ್ಯಾಸಕ್ಕೆ fees ಅನ್ನು ಶಾಲೆಯಲ್ಲಿ ಕಟ್ಟಿಲ್ಲ ಎಂದರೆ ಸಾಕ್ಷಿ ನಾನು ಮನೆಗೆ ಹಣವನ್ನು ಕೊಟ್ಟು ಬಂದಿರುತ್ತೇನೆ ಎಂದು ನುಡಿಯುತ್ತಾರೆ.

**ಮುಂದುವರೆದ ವಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ**